ಕರ್ನಾಟಕ ವಿಧಾನ ಸಭೆ
ಬುಧವಾರ ೧೭ನೇ ಫೆಬ್ರವರಿ ೧೯೯೩
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ ೧೧.೩೦ ಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು: (ಶ್ರೀ ಎ.ಎಸ್. ಕೌಜಲಗಿ) ಅವರು
ಪೀಠವನ್ನು ಅಲಂಕರಿಸಿದ್ದರು.

೧) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

೨) ಹೆಚ್ಚಿಸಿರುವ ಸಾರಿಗೆ ದರಗಳನ್ನು ವಾಪಸ್ ಪಡೆಯಲು ಒತ್ತಾಯ.

*ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- (ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರು). ಸನ್ಮಾನ್ಯ ಅಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ದರವನ್ನು ಜಾಸ್ತಿ ಮಾಡಿರುವ ಬಗ್ಗೆ ಸರ್ಕಾರ ಅದನ್ನು ಸಂಪೂರ್ಣವಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮತ್ತು ಅದರ ಬಗ್ಗೆ ಹೌಸ್ ಕಮಿಟಿಯನ್ನು ಮಾಡಬೇಕೆಂದು ಹೇಳುತ್ತಿದ್ದೇವೆ.

೩) (ವಿರೋಧ ಪಕ್ಷದವರು ಧರಣಿ ಕುಳಿತಿದ್ದರು)

ಶ್ರೀ ವಾಟಾಳ್ ನಾಗರಾಜ್:- (ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರು) ಸನ್ಮಾನ್ಯ ಅಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ. ಬಸ್ ದರವನ್ನು ಜಾಸ್ತಿ ಮಾಡಿರುವ ಬಗ್ಗೆ ಸದನದ ಒಂದು ಸಮಿತಿಯನ್ನು ಅತಿ ಮುಖ್ಯವಾಗಿ ಮಾಡಬೇಕಾಗಿದೆ. ಮತ್ತು ಅದರಲ್ಲಿ ಆಗಿರತಕ್ಕ ಅವ್ಯವಹಾರ, ನಡೆಯತಕ್ಕ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡತಕ್ಕ ಒಂದು ಸಮಿತಿಯನ್ನು ಮಾಡಬೇಕು, ಸರ್ಕಾರ ಇದರ ಬಗ್ಗೆ ಸ್ವಲ್ಪ ಧಾರಾಳವಾದ ನೀತಿಯನ್ನು ಅನುಸರಿಸಬೇಕು. ಈಗ ಏನು ಕೆ.ಎಸ್.ಆರ್.ಟಿ.ಸಿಯಲ್ಲಿ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ ಅದರಲ್ಲಿ ೭ ಪರ್‌ಸೆಂಟ್‌ನಷ್ಟು ಕಡಿಮೆ ಮಾಡುತ್ತೇವೆಂದು ನಿನ್ನೆ ಹೇಳಿದ್ದೀರಿ, ಆದರೆ ತಾವು ಕಡಿಮೆ ಮಾಡಲು ಹೊರಟಿರುವ ನೀತಿ ಬದಲಾವಣೆಯಾಗಬೇಕು.

*ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಆಕಡೆಯವರು ಮತ್ತು ಈಕಡೆಯವರೆಲ್ಲರೂ ಒಟ್ಟುಗೂಡಿ, ಅವರುಗಳೆಲ್ಲರ ಒಟ್ಟಾರೆ ಅಭಿಪ್ರಾಯವೇನೆಂದರೆ ಜಾಸ್ತಿ ಮಾಡಿರುವ ಸಾರಿಗೆ ದರವನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕು; ಸದನದ ಸಮಿತಿಯನ್ನು ಅನೇಕ ಸಲ ಮಾಡಿದ್ದಾರೆ, ಈಗಲೂ ಮಾಡಿ, ಆದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ, ಆದರೆ ಮುಂದೆ ಆಗತಕ್ಕ ನಷ್ಟವನ್ನು ತಪ್ಪಿಸಲು ಮತ್ತು ಜನತೆಗೆ ಒಳ್ಳೆಯ ಸೌಕರ್ಯವನ್ನು ಕೊಡುವ ಬಗ್ಗೆ ಯೋಚನೆ ಮಾಡಬೇಕು. ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ನಾನು ನಿನ್ನೆ ದಿನ ಆ ಸಮಯದಲ್ಲಿ ಅನಿವಾರ್ಯ ಕಾರಣದಿಂದ ಇಲ್ಲಿ ಇರಲಿಲ್ಲ, ಆದರೆ ನಮ್ಮ ಕಡೆಯವರು ಮತ್ತು ಎಲ್ಲರೂ ಸಹ ಒಕ್ಕೊರಲಿನಿಂದ ಅದರ ಬಗ್ಗೆ ಹೇಳಿದ್ದಾರೆ. ಆಕಡೆಯವರೆಲ್ಲರೂ ಬರಲು ಆಗಲಿಲ್ಲ ಅದಕ್ಕಾಗಿ ಆಡಳಿತ ಪಕ್ಷದವರು ಬಂದಿಲ್ಲ, ಆದುದರಿಂದ ಸಾರಿಗೆ ದರವನ್ನು ಏನು ಜಾಸ್ತಿ ಮಾಡಿದ್ದೀರಿ ಅದನ್ನು ದಯಮಾಡಿ ಸಂಪೂರ್ಣವಾಗಿ ವಾಪಸ್ ತೆಗೆದುಕೊಂಡು ಸದನದ ಸಮಿತಿಯನ್ನು ಮಾಡಿ ಚರ್ಚೆಯನ್ನು ಮಾಡಲು ಅವಕಾಶ ಮಾಡಿಕೊಡಿ. ಮತ್ತು ವಾಸ್ತವಿಕವಾದ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಈಗ ಇರತಕ್ಕ ನಷ್ಟವನ್ನು ಸರಿಪಡಿಸಿ ಪ್ರಯಾಣಿಕರಿಗೆ